**ಕಾರ್ಮಿಕ ನ್ಯಾಯಾಲಯ, ಮೈಸೂರು.**

**Ref**:8/2025

ಎಂ.ಡಬ್ಲ್ಯೂ–2

**ದಿನಾಂಕ 10.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ.ಪಿ.ಪಿ.ಬಿ.ಆರ್. ವಕೀಲರಿಂದಃ**

2 ನೇ ಪಕ್ಷಗಾರರ ಸಂಖ್ಯೆ–1 ರವರ ಜೊತೆ ನವೆಂಬರ್ 2023 ರಲ್ಲಿ ನಾವು ಕರಾರು ಮಾಡಿಕೊಂಡಿದ್ದೇವು. ನಮಗಿಂತ ಮುಂಚೆ S.Mac Security services private Ltd ರವರು ಗುತ್ತಿಗೆ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿ. ಸದರಿ ಸಂಸ್ಥೆಯಲ್ಲಿ 1 ನೇ ಪಕ್ಷಗಾರರು ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪಕ್ಷಗಾರರು ದಿನಾಂಕಃ30.09.2005 ರಿಂದ ಸದರಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ S.Mac Security services private Ltd ಸಂಸ್ಥೆಯಲ್ಲಿ ಸೇವೆ ಮುಗಿದ ನಂತರ 1 ನೇ ಪಕ್ಷಗಾರರನ್ನು ನಾವು ಮುಂದುವರೆಸಿದ್ದೇವು ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಖ್ಯೆ–1 ರವರಂತೆ ನಮಗೆ 16 ಜನ clients ಇಡಿ ಭಾರತದಲ್ಲಿ ಇರುತ್ತಾರೆ. ಸದರಿ clients ಗೆ ಕಾರ್ಮಿಕರನ್ನು ಪುರೈಕೆ ಮಾಡುವುದು ನಮ್ಮ ಕೆಲಸ ಎಂದರೆ ಸರಿ. ನಮ್ಮ clients ನಮಗೆ ಯಾವ ರೀತಿಯ ಕಾರ್ಮಿಕರು ಬೇಕು ಎಂದು ನಮಗೆ ತಿಳಿಸುತ್ತಾರೆ ಅದಕ್ಕೆ ತಕ್ಕಂತೆ ನಾನು ಕಾರ್ಮಿಕರನ್ನು ಪುರೈಕೆ ಮಾಡುತ್ತೇವೆ ಎಂದರೆ ಸರಿ. ಅದರ ಪ್ರಕಾರ ನಾವು ಕಾರ್ಮಿಕರಿಗೆ ಬೇಕಾದ ಸೌವಲತ್ತುಗಳನ್ನು ಕೊಡುತ್ತೇವೆ ಎಂದರೆ ಸರಿ. ಸದರಿ ಈ ಪ್ರಕರಣದಲ್ಲಿ service agreement ಹಾಜರು ಪಡಿಸಿರುತ್ತೀರ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ನಮ್ಮ ಕಾರ್ಮಿಕರಿಗೆ ನೇಮಕಾತಿ ಪತ್ರವನ್ನು ನೀಡುತ್ತೇವೆ. ಅದೇ ರೀತಿ ಅವರಿಗೆ ಗುರುತಿನ ಚೀಟಿಯನ್ನು ಸಹಾ ನೀಡುತ್ತೇವೆ. ಅದೇ ರೀತಿ ಕಾರ್ಮಿಕರ ಇ.ಎಸ್.ಐ., ಬೋನಸ್ ಸಹಾ ನೀಡುತ್ತೇವೆ ಎಂದರೆ ಸರಿ.

ಕಾರ್ಮಿಕರಿಗೆ ಕೊಡುವ ವೇತನವನ್ನು 2 ನೇ ಪಕ್ಷಗಾರರ ಸಂಖ್ಯೆ-1 ರವರು ನಮಗೆ ನೀಡುತ್ತಾರೆ ಎಂದರೆ ಸರಿ. ಕಾರ್ಮಿಕರಿಗೆ ಕೊಡುವ ವೇತನ ಹಾಗೂ ಸೌಲಭ್ಯದ ದಾಖಲೆಗಳನ್ನು ನಮ್ಮ ಕಚೇರಿಯಲ್ಲಿ ಇಟ್ಟಿರುತ್ತೇವೆ, ಪ್ರತಿ ತಿಂಗಳು ಅದು ಲೆಕ್ಕಾ ಪರಿಶೋಧನೆ ಆಗುತ್ತದೆ. ಸದರಿ ಲೆಕ್ಕಾ ಪರಿಶೋಧನಾ ಪತ್ರವನ್ನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಕಚೇರಿ ನೀಡುತ್ತೇವೆ ಎಂದರೆ ಸರಿ. ಈ ವ್ಯವಹಾರವನ್ನು ಮೇಲ್ ವಿಚಾರಣೆ ಮಾಡಲು ನಮ್ಮ accounts section ನಲ್ಲಿ ಕೆಲಸಗಾರರು ಇರುತ್ತಾರೆ. ನಮ್ಮ ಸಂಸ್ಥೆಯಲ್ಲಿ certified standing orders ಇರುತ್ತದೆ. ಅದನ್ನು ನಾವು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೇವೆ ಎನ್ನುತ್ತಾರೆ.

ನಮ್ಮಲ್ಲಿ duty roster ದಾಖಲೆ ಇರುತ್ತದೆ. ಸಾಕ್ಷಿಗೆ duty chart ದಾಖಲೆಯನ್ನು ತೋರಿಸಿ ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು **ನಿ.ಡಬ್ಲ್ಯೂ-18** ಎಂದು ಗುರುತಿಸಲಾಯಿತು. 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಗೆ ಹೋಗುವ ಕಾರ್ಮಿಕರಿಗೆ bio-metric entry and exit ಇರುತ್ತದೆ ಎಂದರೆ ಹೌದು. ಸದರಿ ದಾಖಲೆಗಳ ಒಂದು ಪ್ರತಿಯನ್ನು 2 ನೇ ಪಕ್ಷಗಾರರ ಸಂಖ್ಯೆ-1 ರವರ ನಮಗೆ ಕಳುಹಿಸಿಕೊಡುತ್ತಾರೆ. ಸದರಿ ದಾಖಲೆಯಲ್ಲಿ ಕಾರ್ಮಿಕರು ಒಳಗೆ ಬರುವುದು ಹಾಗೂ ಹೊರಗೆ ಹೋಗುವ ಸಮಯದ ಬಗ್ಗೆ ನಮಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. 4 ಏಜೆನ್ಸಿಗಳ ಮುಖಾಂತರ ಹೋಗುವ ಕಾರ್ಮಿಕರ ಮೇಲ್ ವಿಚಾರಣೆಯನ್ನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯವರೇ ನೋಡಿಕೊಳ್ಳುತ್ತಿರುತ್ತಾರೆ.

ನಮ್ಮ ಸಂಸ್ಥೆಯ ಕಾರ್ಮಿಕರ duty chart allot ಮಾಡುವುದು ಹಾಗೂ ಮೇಲ್ ವಿಚಾರಣೆ ಮಾಡುವುದು ಇತ್ಯಾದಿಗಳನ್ನು ಎಸ್.ಮ್ಯಾಕ್ ಸಂಸ್ಥೆಯ ಬೋಪಯ್ಯ ರವರು ಮಾಡುತ್ತಿದ್ದರು ಎಂದರೆ ಸರಿಯಲ್ಲ.

1 ನೇ ಪಕ್ಷಗಾರರು ಕೆಲಸ ಮಾಡುತ್ತಿದ್ದ ಸಮಯದಲ್ಲಿ ಸದರಿ ಬೋಪಯ್ಯ ರವರೇ ಅವರನ್ನು ಕೆಲಸಕ್ಕೆ ಬರಬೇಡಿ ಎಂದು ಹೇಳಿದ್ದರು ಎಂದರೆ ಸಾಕ್ಷಿ ಅವರಿಗೆ ಹಕ್ಕು ಇರುವುದಿಲ್ಲ ಎನ್ನುತ್ತಾರೆ. 1 ನೇ ಪಕ್ಷಗಾರರ ನೇಮಕಾತಿ ಪತ್ರ ನವೆಂಬರ್ 2023 ಪ್ರಾರಂಭವಾಗಿ ಮಾರ್ಚ್ 31 ಕ್ಕೆ ಮುಕ್ತಾಯಾವಾಗುತ್ತದೆ. ನಿ.ಎಂ–2 ರ ದಾಖಲೆಯು ನೇಮಕಾತಿ ಆದೇಶ ಆಗಿರುವುದಿಲ್ಲ. ನೇಮಕಾತಿ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೇವೆ. ಸದರಿ ನೇಮಕಾತಿ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆ ಪ್ರಕಾರ ಕಾರ್ಮಿಕರು ಎಷ್ಟು ಗಂಟೆ ಕೆಲಸ ಮಾಡಬೇಕು ಎಂದರೆ 8 ಗಂಟೆ ಕೆಲಸ ಮಾಡಬೇಕು ಎಂದು ಇರುತ್ತದೆ. ನಿ.ಎಂ.2 ರ ದಾಖಲೆಯಲ್ಲಿ ಕಾರ್ಮಿಕ 9 ಗಂಟೆಗಳ ಕಾಲ ಕೆಲಸ ಮಾಡಬೇಕು ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ಅವರಿಗೆ ಕೆಲಸ 8 ಗಂಟೆಗಳ ಕಾಲ ಆದರೆ ಅವರು ಒಳಗಡೆ ವಾಹನಗಳನ್ನು ನಿಲ್ಲಿಸಿ ಕೆಲಸಕ್ಕೆ ಹೋಗಿ ವಾಪಸ್ಸು ಬರುವ ವೇಳೆಗೆ 9 ಗಂಟೆ ಸಮಯ ಆಗುತ್ತದೆ ಎನ್ನುತ್ತಾರೆ. ಆ ವಿಚಾರವನ್ನು ನಾವು ನಿ.ಎಂ.2 ರ ದಾಖಲೆಯಲ್ಲಿ ಸ್ಪಷ್ಟ ಪಡಿಸಿಲ್ಲ ಎಂದರೆ ಹೌದು. ಆ ಮೂಲಕ ನಾವು ಕಾರ್ಮಿಕ ಕಾಯ್ದೆಯನ್ನು ಉಲ್ಲಂಘಿಸಿ ನೇಮಕಾತಿ ಪತ್ರವನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ.

ದಿನಾಂಕಃ18.04.2024 ರಂದು 1 ನೇ ಪಕ್ಷಗಾರರು 07.36 ರ ಸಮಯದಲ್ಲಿ 2 ನೇ ಪಕ್ಷಗಾರರ ಸಂಖ್ಯೆ–1 ರವರ ಸಂಸ್ಥೆಯ ಒಳಗೆ ಹೋಗಿ ಹಾಗೂ 05.46 ರ ಸಮಯಕ್ಕೆ ಕೆಲಸ ಮುಗಿಸಿ ಹೊರಗಡೆ ಬಂದಿರುತ್ತಾರೆ ಎಂದರೆ ಹೌದು. ಅದ ಕಾರಣ 1 ನೇ ಪಕ್ಷಗಾರರು 10 ಗಂಟೆ 10 ನಿಮಿಷ ಇತ್ತು ಎಂದರೆ ಸಾಕ್ಷಿ ಓ.ಟಿ. ಇತ್ತು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಓ.ಟಿ. ಕೆಲಸ 2 ಗಂಟೆಗಳ ಕಾಲ ಇದ್ದು 8 ಗಂಟೆ ಸಾಮಾನ್ಯ ಕೆಲಸ ಇತ್ತು ಎನ್ನುತ್ತಾರೆ. ಆದ್ದರಿಂದ 1 ನೇ ಪಕ್ಷಗಾರರು 10 ನಿಮಿಷ ಹೆಚ್ಚಿನ ಅವಧಿ ಕೆಲಸ ಮಾಡಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪಕ್ಷಗಾರರು ಸಾಮಾನ್ಯ ಕೆಲಸ 8 ಗಂಟೆ ಮಾಡಿ ಹಾಗೂ ಓ.ಟಿ. ಕೆಲಸ 2 ಗಂಟೆಗಳ ಮಾಡಿರುವುದರಿಂದ ಯಾವುದೇ ಉಲ್ಲಂಘನೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ಅಷ್ಟು ಸಮಯ ಕೆಲಸ ಮಾಡಿ ಹೊರಗೆ ಹೋಗಲು ಯಾವುದೇ ಮೇಲ್ ವಿಚಾರಕರ ಅನುಮತಿ ಪಡೆಯುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನಿಗದಿತ ವೇಳೆಗಿಂತ ಮೊದಲು ಕೆಲಸದಿಂದ ಹೊರಗೆ ಬಂದರೆ ಅನುಮತಿ ಪಡೆದುಕೊಂಡು ಹೋಗಬೇಕಾಗಿರುತ್ತದೆ ಎಂದರೆ ಸರಿ. ಮರುದಿನ ದಿನಾಂಕಃ19.04.2024 ಬೋಪಯ್ಯ ರವರು 1 ನೇ ಪಕ್ಷಗಾರರಿಗೆ ಕೆಲಸಕ್ಕೆ ಬರಬೇಡಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಂತರ 1 ನೇ ಪಕ್ಷಗಾರರು ನಮ್ಮ ಬಳಿ ಬಂದಾಗ 2 ನೇ ಪಕ್ಷಗಾರರ ಸಂಖ್ಯೆ-1 ರವರಿಂದ ನಮಗೆ ನಿಮ್ಮನು ಕೆಲಸಕ್ಕೆ ತೆಗೆದುಕೂಳ್ಳಬೇಡಿ ಎಂದು ಮಾಹಿತಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿ.ಡಬ್ಲ್ಯೂ-4 ರ ದಾಖಲೆಯನ್ನು ತೋರಿಸಲಾಗಿ ಆ ಪ್ರಕಾರ ನಾವು 1 ನೇ ಪಕ್ಷಗಾರರಿಗೆ ಪತ್ರವನ್ನು ಕಳುಹಿಸಿರುತ್ತೇವೆ ಎಂದು ಒಪ್ಪಿರುತ್ತೇವೆ. ಸದರಿ ನಿ.ಡಬ್ಲ್ಯೂ-4 ರ ದಾಖಲೆಯಲ್ಲಿ 1 ನೇ ಪಕ್ಷಗಾರರನ್ನು ಕೆಲಸದಿಂದ ವಜಾ ಮಾಡಲಾಗಿದೆ ಎಂದು ತಿಳಿಸಿರುತ್ತೇವೆ ಎಂದರೆ ಸಾಕ್ಷಿ ನಾವು ವಜಾ ಮಾಡಿರುವುದಿಲ್ಲ ಎನ್ನುತ್ತಾರೆ. ಅದೇ ರೀತಿ ಸದರಿ ಪತ್ರದಲ್ಲಿ 1 ನೇ ಪಕ್ಷಗಾರರಿಗೆ ಮುಂದೆ ನಿಮಗೆ ಸಂಬಂಧಪಟ್ಟಂತ ಹಣ ಕಾಸು ಹಾಗೂ ಇತರೆ ಏನೇ ಇದ್ದರೂ ಅದನ್ನು ಪಡೆದುಕೊಳ್ಳಲು ನಮ್ಮ ಕಚೇರಿಗೆ ಬಂದು ರಾಜಿನಾಮೆ ಪತ್ರವನ್ನು ಕೊಟ್ಟು ಹೋಗಬೇಕೆಂದು ಈ ಮೂಲಕ ನಿಮಗೆ ತಿಳಿಸಲಾಗಿದೆ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿ ಅವರು ಕಚೇರಿಗೆ ಸರಿಯಾಗಿ ಬರುತ್ತಿರಲಿಲ್ಲ ಆದ್ದರಿಂದ ಸದರಿ ಪತ್ರವನ್ನು ಕಳುವುಸಿರುತ್ತೇವೆ ಎನ್ನುತ್ತಾರೆ. ನಿ.ಡಬ್ಲ್ಯೂ-5 ರ ದಾಖಲೆಯ ಪ್ರಕಾರ ನಾವು 1 ನೇ ಪಕ್ಷಗಾರರಿಗೆ ಪತ್ರ ಬರೆದಿದ್ದೇವು ಎಂದರೆ ಸರಿ. ನಂತರ 1 ನೇ ಪಕ್ಷಗಾರರು ಕಾರ್ಮಿಕ ಇಲಾಖೆಗೆ ಹೋಗಿ ದೂರನ್ನು ಕೊಟ್ಟಿರುತ್ತಾರೆ ಎಂದರೆ ನಮಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ನಂತರ ನಾವು ಸಂಧಾನ ಸಮಾಲೋಚನೆಗೆ ಹಾಜರಾಗಿದ್ದೇವು.

ಸದರಿ ಸಂಧಾನ ಸಭೆ ನಡೆಯುವ ಸಮಯದಲ್ಲಿ ನಾವು 1 ನೇ ಪಕ್ಷಗಾರರಿಗೆ ಒಂದು ವರ್ಗಾವಣೆ ಪತ್ರ ನೀಡಿದ್ದೇವು ಎಂದರೆ ಸರಿ. ಸದರಿ ವರ್ಗಾವಣೆ ಪತ್ರದ ದಾಖಲೆ ನಿ.ಡಬ್ಲ್ಯೂ-7 ರಂತೆ ಗುರುತಿಸಲ್ಪಟ್ಟಿರುತ್ತದೆ ಎಂದರೆ ಸರಿ. ಸದರಿ ವರ್ಗಾವಣೆ ಪತ್ರವನ್ನು ನೀವು ಕಾನೂನು ವಿರುದ್ಧ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಕಾರ್ಮಿಕ ಇಲಾಖೆಯಲ್ಲಿ ಸಂಧಾನ ಸಭೆ ನಡೆಯುತ್ತಿದ್ದಾಗ 1 ನೇ ಪಕ್ಷಗಾರರನ್ನು ವರ್ಗಾವಣೆ ಮಾಡಿರುವ ಆದೇಶ ಮಾಡಿದ್ದು ಕಾನೂನು ಭಾಹೀರ ಎಂದರೆ ಎ.ಎಲ್.ಸಿ. ರವರು ಬೇರೆ ಕಡೆ ಅವರನ್ನು ಹಾಕಿ ಕೊಡಿ ಎಂದು ಹೇಳಿದ್ದರು, ಆಗ ನಾವು ವರ್ಗಾವಣೆ ಆದೇಶ ನೀಡಿದ್ದೇವು ಎನ್ನುತ್ತಾರೆ. ನಾವು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ದಾಖಲೆಗಳನ್ನು (ನಿ.ಎಂ.3, 5, 6, 7 ಹಾಗೂ 8)ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರಿಗೆ ನಾವು ನವಿಕರಣ ಪತ್ರ ಕೊಟ್ಟಿರುತ್ತೀರ ಎಂದರೆ ಸಾಕ್ಷಿ ಅವರು ಕಚೇರಿಗೆ ಬಂದಿಲ್ಲ ಎನ್ನುತ್ತಾರೆ. ಸದರಿ ನವಿಕರಣ ಪತ್ರವನ್ನು ಸಿದ್ಧಪಡಿಸಿದ್ದೇವು ಆದರೆ ಸದರಿ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ. 1 ನೇ ಪಕ್ಷಗಾರರು ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1 ನೇ ಪಕ್ಷಗಾರರ ಕೆಲಸ semi skilled ಪರೀದಿಯಲ್ಲಿ ಬರುತ್ತದೆ ಎಂದರೆ ಸರಿ. 1 ನೇ ಪಕ್ಷಗಾರರಿಗೆ ಹಾಲು ಕುಡಿಯುವ ಮಗು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರಿಗೆ ಹಾಲು ಕುಡಿಯುವ ಮಗುವಿದ್ದರೂ ಕೂಡ ನಿರಂತರವಾಗಿ ನಾವು ಅವರಿಗೆ ರಾತ್ರಿ ಪಾಳೆ ಕೆಲಸ ಕೊಡುತ್ತಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 3 ತಿಂಗಳಿಗೊಮ್ಮೆ ಅವರಿಗೆ ರಾತ್ರಿ ಪಾಳೆ ಕೆಲಸ ಕೊಡುತ್ತಿದ್ದೇವು ಎನ್ನುತ್ತಾರೆ. ನಿ.ಡಬ್ಲ್ಯೂ-18 ರ ದಾಖಲೆಯ ಪ್ರಕಾರ 1 ನೇ ಪಕ್ಷಗಾರರು ಏಪ್ರಿಲ್ 14 ರಿಂದ 20 ಏಪ್ರಿಲ್ ವರೆಗೆ ರಾತ್ರಿ ಪಾಳೆ ಕೆಲಸದಲ್ಲಿ ಇದ್ದರು ಎಂದರೆ ಸರಿ.

ಅದೇ ರೀತಿ ದಿನಾಂಕಃ21.04.2024 ರಿಂದ ದಿನಾಂಕಃ27.04.2024 ರವರೆಗೆ 1 ನೇ ಪಕ್ಷಗಾರರು ಎಲ್.ಒ.ಪಿ. ಎಂದು ನಮೂದು ಇರುತ್ತದೆ ಎಂದರೆ ಅವರು ಕೆಲಸಕ್ಕೆ ಬಂದಿಲ್ಲ ಎನ್ನುತ್ತಾರೆ.ಮುಂದುವರೆದು ದಿನಾಂಕಃ28.04.2024 ರಿಂದ ದಿನಾಂಕಃ04.05.2024 ರವರೆಗೆ 1 ನೇ ಪಕ್ಷಗಾರರು ಎಲ್.ಒ.ಪಿ. ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ಅವರು ಕೆಲಸಕ್ಕೆ ಹಾಜರಾಗಿಲ್ಲ ಎನ್ನುತ್ತಾರೆ. ನಾವು 1 ನೇ ಪಕ್ಷಗಾರರ ಹೆಸರನ್ನು ಸದರಿ ಪಟ್ಟಿಯಿಂದ ತೆಗೆದು ಹಾಕಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರನ್ನು ರಾತ್ರಿ ಪಾಳೆಯಲ್ಲಿ ಕೆಲಸ ಮಾಡಿಸುತ್ತಿದ್ದ ಬಗ್ಗೆ ಅವರಿಂದ ಸಮ್ಮತಿ ಪತ್ರ ಪಡೆದಿಲ್ಲ ಎಂದರೆ ಸಾಕ್ಷಿ ಅದನ್ನು ಅವರು ತಂದು ಕೊಟ್ಟಿಲ್ಲ ಎನ್ನುತ್ತಾರೆ. ನಾನು ಕೆಲಸಕ್ಕೆ ಸಂಬಂಧಪಟ್ಟಂತೆ 1 ನೇ ಪಕ್ಷಗಾರರ ಜೊತೆ ಸಂಭಾಶಣೆ ಮಾಡಿರುತ್ತೇವೆ ಎಂದರೆ ಸಾಕ್ಷಿ ಅವರು 1 ನೇ ಪಕ್ಷಗಾರರು ನಮ್ಮ ಸಿಬ್ಬಂದಿ ಆಗಿರುವುದರಿಂದ ಕೆಲಸಕ್ಕೆ ಸಂಬಂಧಪಟ್ಟಂತೆ ಸಂಭಾಶಣೆ ಮಾಡಿರುತ್ತೇವೆ ಎನ್ನುತ್ತಾರೆ. ದಿನಾಂಕಃ 05.05.2024 ರಂದು 1 ನೇ ಪಕ್ಷಗಾರರನ್ನು ಕೆಲಸದಿಂದ ವಜಾ ಮಾಡಿರುತ್ತೇವೆ ಎನ್ನುವುದನ್ನು ನಾವು ಅವರಿಗೆ ತಿಳಿಸಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ07.05.2024 ರಂದು ನಡೆದ ಸಂಭಾಶಣೆಯಲ್ಲಿ 2 ನೇ ಪಕ್ಷಗಾರರ ಸಂಖ್ಯೆ-1 ರವರ ಹೇಳಿದ್ದ ಕಾರಣಕ್ಕೆ ನಿಮ್ಮನು ಕೆಲಸದಿಂದ ವಜಾ ಮಾಡುತ್ತೇವೆ ಎಂದು ತಿಳಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರು ನಾವು ಆರೋಪಿಸಿದಂತೆ ಯಾವುದೇ ದುರ್ನಡತೆಯನ್ನು ಮಾಡಿಲ್ಲ ಆದರೂ ಕೂಡ ಅವರ ವಿರುದ್ಧ ಈ ರೀತಿ ಕ್ರಮವನ್ನು ಜರುಗಿಸಿರುತ್ತೇವೆ ಎಂದರೆ ಸರಿಯಲ್ಲ. ದುರ್ನಡತೆಗೆ ಸಂಬಂಧಪಟ್ಟಂತೆ ಆಂತರಿಕ ವಿಚಾರಣೆ ಮಾಡಿದ್ದೀರ ಎಂದರೆ ಸಾಕ್ಷಿ ಅವರು ಕಚೇರಿ ಬಂದಿಲ್ಲ, ಫೋನ್ ಮೂಲಕ ಅವರಿಗೆ ತಿಳಿಸಿದ್ದೇವು ಆದರೂ ಬಂದಿಲ್ಲ, ನೋಟೀಸ್ ನೀಡಿದ್ದೇವು ಆದರೂ ಬಂದಿಲ್ಲ. ಆದ್ದರಿಂದ ಆಂತರಿಕ ವಿಚಾರಣೆ ಮಾಡಿಲ್ಲ ಎನ್ನುತ್ತಾರೆ. ಆಂತರಿಕ ವಿಚಾರಣೆಗೆ ನಾವು ಆಷಾ ಎನ್ನುವ ವಿಚಾರಣಾ ಅಧಿಕಾರಿಗಳನ್ನು ನೇಮಕ ಮಾಡಿದ್ದೇವು.

ಆ ರೀತಿ ನಾವು ಆಂತರಿಕ ವಿಚಾರಣಾ ಅಧಿಕಾರಿಗಳನ್ನು ನೇಮ ಮಾಡಿಲ್ಲ, ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. 1 ನೇ ಪಕ್ಷಗಾರರಿಗೆ ಆಂತರಿಕ ವಿಚಾರಣಾ ಅಧಿಕಾರಿಗಳ ಮುಖಾಂತ ಯಾವುದೇ ನೋಟೀಸ್ ಕಳುಹಿಸಿಲ್ಲ ಎಂದರೆ ಸಾಕ್ಷಿ ನೋಟೀಸ್ ಕಳುಹಿಸಿರುತ್ತೇವೆ ಆದರೆ ಬಂದಿಲ್ಲ ಎನ್ನುತ್ತಾರೆ. ನಾನು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**